ಬೆಂಗಳೂರು ಉಪನಗರಗಳಿಗೆ ರೈಲು ಸಂಪರ್ಕ ಯೋಜನೆ

139(354) **ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ):–** ಮಾನ್ಯ ನಗರಾಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಂಗಳೂರು ಮಹಾನಗರ ವ್ಯಾಪ್ತಿಯ ಉಪನಗರಗಳಿಗೆ ಸಂಪರ್ಕ ಕಲ್ಪಿಸುವ ರೈಲು ಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತರಲು ಸರ್ಕಾರ ಕ್ರಮ ಜರುಗಿಸಿದೆಯೇ; (ವಿವರ ನೀಡುವುದು)

(ಆ) ಬೆಂಗಳೂರು ಉತ್ತರ ಕ್ಷೇತ್ರ ವ್ಯಾಪ್ತಿಗೆ ಒಳಪಡುವ ಕೆಂಗೇರಿ, ಯಶವಂತಪುರ, ನೆಲಮಂಗಲ, ಯಲಹಂಕ ಬೈಯ್ಯಪ್ಪನಹಳ್ಳಿ, ಕೆ.ಆರ್. ಪುರಂಗಳಲ್ಲಿರುವ ರೈಲು ನಿಲ್ದಾಣಗಳಿಗೆ ಅನುಗುಣವಾಗಿ ಕೆಂಗೇರಿಯಿಂದ ಕೆ.ಆರ್. ಪುರಂವರೆಗೆ ಸಂಪರ್ಕಿಸುವ ಕಮ್ಯುಟರ್ ಅಥವಾ ಉಪನಗರ ಸಂಪರ್ಕ ರೈಲು ಮಾರ್ಗ ವ್ಯವಸ್ಥೆಗೊಳಿಸುವಲ್ಲಿ ಸರ್ಕಾರದ ಕ್ರಿಯಾ ಯೋಜನೆಗಳೇನು ;

(ಇ) ಪರಿಣಾಮಕಾರಿ ಹಾಗೂ ಸುಲಲಿತ ಸಮರ್ಪಕ ಜಾಲ ಸೃಷ್ಟಿಸುವ ಈ ಯೋಜನೆಯನ್ನು ತ್ವರಿತಗತಿಯಲ್ಲಿ ಕೈಗೊಳ್ಳಲು ಸರ್ಕಾರದ ನಿಲುವುಗಳೇನು ?

ಶ್ರೀ ವಿನಯ ಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು):–

(ಅ) ಬೆಂಗಳೂರು ಉಪನಗರ ರೈಲು ಯೋಜನೆಯನ್ನು ಜಾರಿಗೊಳಿಸಲು ಮೆ॥ ರೈಟ್ಸ್ ಮುಖಾಂತರ ಪೂರ್ವಸಾಧ್ಯತಾ ವರದಿಯನ್ನು ತಯಾರಿಸಿದೆ. ಈ ವರದಿಯ ಶಿಫಾರಸ್ಸಿನ ಪ್ರಕಾರ ಈ ಕೆಳಗಿನ ಕ್ರಮಗಳನ್ನು ಕೈಗೊಂಡಿದೆ.

1. ಬೆಂಗಳೂರು ಉಪನಗರ ರೈಲು ಯೋಜನೆಯ "ಹಂತ 1ಎ" ಅನುಷ್ಠಾನಕ್ಕಾಗಿ ವಿವರವಾದ ಯೋಜನಾ ವರದಿಯನ್ನು ಮೆ॥ ರೈಟ್ಸ್ ಮುಖಾಂತರ ತಯಾರಿಸಲಾಗುತ್ತಿದೆ.

2. ಈ ಯೋಜನೆಯನ್ನು ಅನುಷ್ಠಾನಗೊಳಿಸಲು "ಬೆಂಗಳೂರು ಉಪನಗರ ರೈಲು ಕಂಪನಿ ನಿಯಮಿತ" ಎಂಬ ವಿಶೇಷ ಉದ್ದೇಶದ ಸಂಸ್ಥೆಯನ್ನು ಕಂಪನಿಗಳ ಆಕ್ಟ್ 1956ರ ಪ್ರಕಾರ ದಿನಾಂಕ: 12–03–2014ರಂದು ಸ್ಥಾಪಿಸಲಾಗಿದೆ. ಮೊದಲನೆಯ ನಿರ್ದೇಶಕರ ಮಂಡಳಿಯ ಸಭೆಯನ್ನು 10ನೇ ಏಪ್ರಿಲ್ 2014ರಂದು ನಡೆಸಲಾಗಿರುತ್ತದೆ.

(ಆ) ಮೆ॥ ರೈಟ್ಸ್ ಸಂಸ್ಥೆಯು ತಯಾರಿಸಿದ ಬೆಂಗಳೂರು ಉಪನಗರ ರೈಲು ಯೋಜನೆಯ ಪೂರ್ವಸಾಧ್ಯತಾ ವರದಿಯಲ್ಲಿ ಈಗಾಗಲೇ ಲಭ್ಯವಿರುವ ರೈಲ್ವೇ ಮೂಲಭೂತ ಸೌಕರ್ಯವನ್ನು ಬಳಸಿಕೊಂಡು ಯೋಜನೆಯನ್ನು 3 ಹಂತದಲ್ಲಿ ಅನುಷ್ಠಾನಗೊಳಿಸಲು ಶಿಫಾರಸ್ಸು ಮಾಡಿದೆ ಹಾಗೂ ಈ ಯೋಜನೆಯನ್ನು ಮುಖ್ಯವಾಗಿ ಬೆಂಗಳೂರು–ಬಂಗಾರಪೇಟೆ, ಬೆಂಗಳೂರು–ಮಂಡ್ಯ, ಬೆಂಗಳೂರು–ತುಮಕೂರು, ಯಶವಂತಪುರ–ಬೈಯ್ಯಪ್ಪನಹಳ್ಳಿ, ಯಶವಂತಪುರ–ಚಿಕ್ಕಬಳ್ಳಾಪುರ, ಬೆಂಗಳೂರು–ದೊಡ್ಡಬಳ್ಳಾಪುರ ಕಾರಿಡಾರ್‌ಗಳಲ್ಲಿ ಅನುಷ್ಠಾನ ಗೊಳಿಸಲು ಪ್ರಸ್ತಾಪಿಸಲಾಗಿದೆ.

ಈ ವರದಿಯ ಪ್ರಕಾರ ಒಟ್ಟು ಯೋಜನಾ ವೆಚ್ಚ ರೂ. 8759.00 ಕೋಟಿಗಳಾಗಿರುತ್ತದೆ. ಈ ಯೋಜನೆ ಪೂರ್ತಿಯಾಗಿ ಜಾರಿಯಾದಾಗ ಪ್ರತಿದಿನ ಒಟ್ಟು 25 ಲಕ್ಷ ಪ್ರಯಾಣಿಕರನ್ನು ಕೊಂಡೊಯ್ಯುವ ಸಾಮರ್ಥ್ಯ ಹೊಂದಿರುತ್ತದೆ.

ಈ ವರದಿಯಲ್ಲಿ ಅಧ್ಯತೆಯ ಆಧಾರದ ಮೇಲೆ ಬೆಂಗಳೂರು ಉಪನಗರ ರೈಲು ಯೋಜನೆ ಹಂತ–1ಎ ಯನ್ನು ಜಾರಿಗೊಳಿಸಲು ಶಿಫಾರಸ್ಸು ಮಾಡಿದೆ.

ಹಂತ–1ಎ ಕಾರಿಡಾರ್‌ಗಳು ಈ ಕೆಳಗಿನಂತಿದೆ:–

ಬೆಂಗಳೂರು–ಬಂಗಾರಪೇಟೆ

ಬೆಂಗಳೂರು–ಮಂಡ್ಯ

ಬೆಂಗಳೂರು– ತುಮಕೂರು

ಹಂತ–1ಎರ ಯೋಜನೆ ಜಾರಿಯಾದಾಗ ಪ್ರತಿದಿನ ಒಟ್ಟು 6 ಲಕ್ಷ ಪ್ರಯಾಣಿಕರನ್ನು ಕೊಂಡೊಯ್ಯುವ ಸಾಮರ್ಥ್ಯ ಹೊಂದಿರುತ್ತದೆ.

(ಇ) ಈ ಕೆಳಗಿನ ಪ್ರಸ್ತಾವನೆಗಳನ್ನು ಅನುಮೋದಿಸಲು ಯೋಜನೆಯ ಪ್ರಸ್ತಾಪವನ್ನು ಭಾರತ ಸರ್ಕಾರದ ರೈಲ್ವೆ ಮಂತ್ರಾಲಯಕ್ಕೆ ದಿನಾಂಕ: 28–10–2013ರಂದು ಕಳುಹಿಸಿಕೊಡಲಾಗಿದೆ.

* ಈ ಯೋಜನೆಯನ್ನು ರಾಜ್ಯ ಸರ್ಕಾರದೊಂದಿಗೆ ಅನುಷ್ಠಾನಗೊಳಿಸಲು ಒಪ್ಪಿಗೆ ನೀಡುವುದು.

* ಬೆಂಗಳೂರು ಉಪನಗರ ರೈಲು ಕಂಪನಿಗೆ ಬಂಡವಾಳ ಹೂಡುವುದು.

* ಯೋಜನೆಯ ಶೇ. 50% ರಷ್ಟು ವೆಚ್ಚವನ್ನು ಕೇಂದ್ರ ಸರ್ಕಾರ ಭರಿಸುವುದು.ಬೆಂಗಳೂರು

ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಚಿತ್ರನಗರಿ ನಿರ್ಮಾಣ

140(355) **ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ):–** ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಅಂತರಾಷ್ಟ್ರೀಯ ಗುಣಮಟ್ಟದ ಫಿಲಂ ಸಿಟಿ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ಈ ಹಿಂದೆ ಹೆಸರಘಟ್ಟ ಪ್ರದೇಶದಲ್ಲಿ ಮೀಸಲಿರಿಸಿರುವ 360 ಎಕರೆಗಳೆಷ್ಟು ಭೂಮಿಯಲ್ಲಿ ಫಿಲಂ ಸಿಟಿ ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ; ಸದರಿ ಭೂಮಿಯನ್ನು ಉದ್ದೇಶಿತ ಕಾರ್ಯಕ್ಕಾಗಿ ಕಾಯ್ದಿರಿಸಿಕೊಳ್ಳಲಾಗಿದೆಯೇ; ಇಲ್ಲವಾದಲ್ಲಿ ಈ ಕುರಿತಾದ ವಿವರಗಳೇನು;

(ಇ) ವಿಶೇಷತೆ : ಕನ್ನಡ ಚಲನಚಿತ್ರ ಉದ್ಯಮವನ್ನು ಪ್ರೋತ್ಸಾಹಿಸುವ ದಿಶೆಯಲ್ಲಿ ಜನತಾ ಚಿತ್ರ ಮಂದಿರಗಳನ್ನು ಸ್ಥಾಪಿಸುವ ಮೂಲಕ ಉದ್ಯಮದ ಬಲವರ್ಧನೆಗೆ ಸರ್ಕಾರದ ನಿಲುವುಗಳೇನು ?

ಶ್ರೀ ಆರ್. ವಿ ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):–

(ಅ) ಹೌದು ಪರಿಶೀಲನೆಯಲ್ಲಿದೆ

(ಆ) ಲಭ್ಯವಿರುವ 302.12 ಎಕರೆ ಪ್ರದೇಶದಲ್ಲಿ ಪಶುಸಂಗೋಪನೆ ಇಲಾಖೆಯ ವಿವಿಧ ಅಭಿವೃದ್ಧಿ ಮತ್ತು ವಿಸ್ತರಣಾ ಚಟುವಟಿಕೆಗಳಿಗಾಗಿ ಆ ಇಲಾಖೆ ಕೋರುತ್ತಿರುವಂತೆ 150 ಎಕರೆ ಜಮೀನನ್ನು ನೀಡುವ ಬಗ್ಗೆ ಮತ್ತು ಉಳಿದ 152.12 ಎಕರೆ ಜಮೀನಿನಲ್ಲಿ ಪ್ರವಾಸೋದ್ಯಮ ಯೋಜನೆಯನ್ನು ಸರ್ಕಾರಿ–ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ಮತ್ತು ಪಾರ್ಕಿಂಗ್, ಉಪಹಾರ ಇತ್ಯಾದಿ ಸಾಮಾನ್ಯ ಬಳಕೆಯ ಸೌಲಭ್ಯಗಳ ವೆಚ್ಚವನ್ನು ತಗ್ಗಿಸುವ ದೃಷ್ಟಿಯಿಂದ ಈ ಜಮೀನಿನಲ್ಲಿ ಚಿತ್ರನಗರಿ, ಥೀಮ್ ಪಾರ್ಕ್, ಗಾಲ್ಫ್ ರೆಸಾರ್ಟ್ ಇತ್ಯಾದಿಗಳನ್ನು ಒಳಗೊಂಡ ಸಂಕೀರ್ಣಗಳು ಅಭಿವೃದ್ಧಿಪಡಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.